## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ಇವರು ನಿಯಮ-72ರ ಗಮನ ಸೆಳೆಯುವ ಸೂಚನೆ ಸಂಖ್ಯೆ:44ಕ್ಕೆ ಉತ್ತರ;

**ಸೂಚನೆ:**

ಬೆಂಗಳೂರಿನಲ್ಲಿ ಇತ್ತೀಚೆಗೆ ಸಂಭವಿಸಿದ ಆರ್.ಸಿ..ಬಿ. ವಿಜಯೋತ್ಸವ ವೇಳೆ ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ರೂ.25 ಲಕ್ಷ ಪರಿಹಾರ ಘೋಷಿಸಿದ ರಾಜ್ಯ ಸರ್ಕಾರ, ನಾಲ್ಕು ವರ್ಷಗಳ ಜಿಲ್ಲೆ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಸಿಗದೇ 34 ಜನರ ಕುಟುಂಬಗಳಿಗೆ ಪರಿಹಾರ ನೀಡುವಲ್ಲಿ ತಾರತಮ್ಯವೆಸಗಿರುವ ಕುರಿತು.

**ಉತ್ತರ:**

ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ದಿನಾಂಕ:11.07.2023ರಂದು ಹೊರಡಿಸಿರುವ NDRF/SDRF ಮಾರ್ಗಸೂಚಿಯನ್ವಯ ಅಧಿಸೂಚಿತ ವಿಪತ್ತುಗಳಾದ (Notified Disasters) ಚಂಡಮಾರುತಗಳು, ಬರಗಾಲಗಳು, ಭೂಕಂಪಗಳು, ಬೆಂಕಿ, ಪ್ರವಾಹಗಳು, ಸುನಾಮಿಗಳು, ಆಲಿಕಲ್ಲು ಮಳೆ, ಭೂಕುಸಿತಗಳು, ಹಿಮಪಾತಗಳು, ಮೇಘ ಸ್ಫೋಟಗಳು, ಕೀಟಗಳ ದಾಳಿ, ಹಿಮ ಮತ್ತು ಶೀತ ಅಲೆಗಳು, ಮಿಂಚು ಮತ್ತು ಶಾಖದ ಅಲೆಗಳಿಂದ ಹಾನಿಗೊಳಗಾದ ಪೀಡಿತ ವ್ಯಕ್ತಿಗಳಿಗೆ ಅಥವಾ ವ್ಯಕ್ತಿಗಳ ಕುಟುಂಬಗಳಿಗೆ ಪರಿಹಾರ ಒದಗಿಸಲು ತಗಲುವ ವೆಚ್ಚವನ್ನು ಭಾರತ ಸರ್ಕಾರದ ಗೃಹ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಅನುಮೋದಿತ ವಸ್ತುಗಳು ಮತ್ತು ಸಹಾಯದ ಮಾನದಂಡಗಳು ಮತ್ತು ಮಾರ್ಗಸೂಚಿಗಳ (Approved items and norms of assistance and guidelines) ಪ್ರಕಾರ ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿಯಿಂದ (SDRF) ಪರಿಹಾರವನ್ನು ನೀಡಲು ಅವಕಾಶವಿರುತ್ತದೆ.

ಮುಂದುವರೆದಂತೆ ವಿಪತ್ತು ನಿರ್ವಹಣಾ (ತಿದ್ದುಪಡಿ) ಕಾಯ್ದೆ, 2025 ರ ಕಲಂ-2(ಡಿ) ಅಡಿಯಲ್ಲಿ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿರುತ್ತದೆ.

> Explanation:"For the removal of doubts, it is hereby clarified that the expression 'man-made causes' does not include any law and order-related matter or situation, or any situation arising from a law and order-related matter or situation."

ಬೆಂಗಳೂರು ಮಹಾನಗರದಲ್ಲಿ ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿತದ ಘಟನೆಯಲ್ಲಿ ಮೃತಪಟ್ಟ ವ್ಯಕ್ತಿಗಳ ಕುಟುಂಬಗಳಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ (ಸಿಎಂಆರ್‌ಎಫ್) ರಾಜ್ಯ ಸರ್ಕಾರವು ರೂ.25.00 ಲಕ್ಷಗಳಂತೆ ಮೃತಪಟ್ಟ ಒಟ್ಟು 11 ಜನ ಅವಲಂಭಿತರಿಗೆ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಮುಖಾಂತರ ಪರಿಹಾರ ಪಾವತಿ ಮಾಡಲಾಗಿರುತ್ತದೆ.

2021 ರ ಮೇ-2 ಮತ್ತು ಮೇ-3 ರಂದು ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಸಂಭವಿಸಿರಬಹುದಾದ ಘಟನೆಯಿಂದಾಗಿ ಮೃತಪಟ್ಟ ಕೋವಿಡ್-19 ವೈರಾಣು ಸೋಂಕಿತ 24 ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 232 ಟಿಎನ್‌ಆರ್ 2021, ದಿನಾಂಕ:21.05.2021 ಹಾಗೂ 15.07.2021ರನ್ವಯ ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ತಲಾ ರೂ.2.00 ಲಕ್ಷ (ಎರಡು ಲಕ್ಷ) ಗಳಂತೆ ಒಟ್ಟು ರೂ.48.00 ಲಕ್ಷಗಳ ಪರಿಹಾರವನ್ನು ಪಾವತಿಸಲಾಗಿರುತ್ತದೆ.

ಇದಲ್ಲದೆ, ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ದಾಖಲಾಗಿರುವ ಸಾರ್ವಜನಿಕ ಹಿತಾಸಕ್ತಿ ಕುರಿತಾದ ರಿಟ್ ಅರ್ಜಿ ಸಂಖ್ಯೆ:6435/2020ರ ದಿನಾಂಕ:06.07.2021ರ ತೀರ್ಪಿನಂತೆ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಸಂಭವಿಸಿರಬಹುದಾದ ಘಟನೆಯಿಂದಾಗಿ ಮೃತಪಟ್ಟ ಕೋವಿಡ್-19 ವೈರಾಣು ಸೋಂಕಿತ 24 ವ್ಯಕ್ತಿಗಳ ಪೈಕಿ 13 ಮೃತ ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 232 ಟಿಎನ್‌ಆರ್ 2021, ದಿನಾಂಕ:15.07.2021ರನ್ವಯ ತಲಾ ರೂ.3.00 ಲಕ್ಷಗಳಂತೆ ಒಟು ರೂ.39.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ ಇವರಿಂದ ಬಿಡುಗಡೆ ಮಾಡಲಾಗಿರುತ್ತದೆ.

ಮೇಲಿನಂತೆ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಸಂಭವಿಸಿರಬಹುದಾದ ಘಟನೆಯಿಂದಾಗಿ ಮೃತಪಟ್ಟಂತಹ 24 ವ್ಯಕ್ತಿಗಳ ಪೈಕಿ 13 ಮೃತ ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ತಲಾ ರೂ.5.00 ಲಕ್ಷಗಳಂತೆ ಒಟ್ಟು ರೂ.65.00 ಲಕ್ಷಗಳನ್ನು ಮತ್ತು 11 ಜನರಿಗೆ ತಲಾ ರೂ.2.00 ಲಕ್ಷಗಳಂತೆ ಒಟ್ಟು ರೂ.22.00 ಲಕ್ಷಗಳನ್ನು ಒಟ್ಟಾರೆಯಾಗಿ ಒಟ್ಟು ರೂ.87.00 ಲಕ್ಷಗಳನ್ನು ಪರಿಹಾರ ನೀಡಲಾಗಿರುತ್ತದೆ.

ಎನ್‌ಡಿಆರ್‌ಎಫ್ ಮಾನದಂಡಗಳ ಪ್ರಕಾರ, ಕೋವಿಡ್-19 ಸಂಬಂಧಿತ ಎಂದು ಪ್ರಮಾಣೀಕರಿಸಲ್ಪಟ್ಟ ಮರಣಗಳಿಗೆ ಸಂಬಂಧಪಟ್ಟಂತೆ ಮಾತ್ರ ಎಸ್‌ಡಿಆರ್‌ಎಫ್ ರಡಿಯಲ್ಲಿ ಮೃತರ ಹತ್ತಿರದ ಸಂಬಂಧಿಕರಿಗೆ ರೂ. 50,000/- ಗಳಂತೆ ರೂ.12.00 ಲಕ್ಷಗಳ ಪರಿಹಾರವನ್ನು ನೀಡಲಾಗಿರುತ್ತದೆ.

ಸಂಖ್ಯೆ: ಕಂಇ 324 ಟಿಎನ್‌ಆರ್ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು